ದಿನಾಂಕಃ 29-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಆರೋಪಿ ಹಾಗೂ ಪಿರ್ಯಾದುದಾರ ಫೈನಾನ್ಸ್ ನಡುವೆ ಸಾಲ ತೆಗೆದುಕೊಂಡ ವಿಚಾರದಲ್ಲಿ ವ್ಯವಹಾರ ಇರುತ್ತದೆ ಎಂದರೆ ಸರಿ. ಆರೋಪಿ ನಮ್ಮ ಫೈನಾನ್ಸ್ ನಿಂದ ಸಾಲವನ್ನು ಪಡೆದುಕೊಂಡ ವಿಚಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಆರೋಪಿಯು 2018 ರಲ್ಲಿ ಫೈನಾನ್ಸ್ ನಿಂದ ಸಾಲವನ್ನು ಪಡೆದಿರುತ್ತಾರೆ. ಆರೋಪಿಯು ಬೇಲೂರು ಬ್ರ್ಯಾಂಚ್ ನಿಂದ ಸಾಲವನ್ನ ಪಡೆದಿರುತ್ತಾರೆ. ನಾನು ಚಿಕ್ಕಮಗಳೂರು ಹೆಡ್ ಆಫೀಸ್ ನಲ್ಲಿ ಕೆಲಸ ಮಾಡುತ್ತಿದ್ದೆನು. ಸದರಿ ಸಾಲದ ವ್ಯವಹಾರ ಬೇಲೂರು ಬ್ರ್ಯಾಂಚ್ ನಲ್ಲಿ ಆಗಿರುವುದರಿಂದ ನನಗೆ ಈ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೇಲೂರು ಬ್ರ್ಯಾಂಚ್ ನಿಂದ ಸಾಲವನ್ನು ಪಡೆದುಕೊಳ್ಳುವಾಗ ನಾನು ಇದ್ದೆನು. ದಿಃ19.07.2018 ರಂದು ಆರೋಪಿಯು ಸಾಲವನ್ನು ಪಡೆದಿರುತ್ತಾರೆ. ಲೋನ್ ಅಗ್ರಿಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ, ಹಾಜರುಪಡಿಸಬಹುದು. ಸಾಲವನ್ನು ಕೊಡುವಾಗ ಸಾಲದ ಕಂತಿನ ಬಾಬ್ತು ನಾವು ಆರೋಪಿಯಿಂದ ಚೆಕ್ ಗಳನ್ನು ಪಡೆಯುತ್ತೇವೆ ಎಂದರೆ ಸರಿಯಲ್ಲ. ನಾವು ಆರೋಪಿಯು ಸಾಲವನ್ನು ಪಡೆದುಕೊಳ್ಳುವಾಗ ಆತನ ಬಳಿಯಿಂದ 12 ಚೆಕ್ಕುಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ನಾವು ತೀರುವಳಿ ಪತ್ರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ನೀಡಿದರು ಎನ್ನಲಾದ 12 ಚೆಕ್ಕುಗಳ ಪೈಕಿ 2 ಚೆಕ್ಕುಗಳನ್ನು ಬ್ಯಾಂಕಿಗೆ ನಗದೀಕರಣಕ್ಕೆ ಹಾಕಿರುತ್ತೇವೆ ಎಂದರೆ ಸಾಕ್ಷಿದಾರರು

ಈ ಕೇಸಿನ 2 ಚೆಕ್ ಗಳನ್ನು ಹಾಜರುಪಡಿಸಿರುತ್ತೇವೆ. ಸಾಕ್ಷಿದಾರರು ಮುಂದುವರಿದು  ನುಡಿಯುತ್ತಾರೆ ಒಂದೇ ಅಗ್ರಿಮೆಂಟ್ ಗೆ ಆರೋಪಿ 2 ಚೆಕ್ಕುಗಳನ್ನು ನೀಡಿರುತ್ತಾರೆ. ನಾನು ಹೆಡ್ ಆಫೀಸ್ ನಲ್ಲಿ ಕೆಲಸ ಮಾಡುವುದರಿಂದ ಬೇಲೂರು ಬ್ರ್ಯಾಂಚ್ ನಲ್ಲಿ ಏನೇನು ದಾಖಲೆಗಳನ್ನು ಇಟ್ಟುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

Loan Transaction ನಲ್ಲಿ ಒಂದು ಫೈಲ್ ಹಾಗೂ ರಿಜಿಸ್ಟರ್ ಅನ್ನು ಮೈನ್ ಟೇನ್ ಮಾಡುತ್ತೇವೆ ಎಂದರೆ ಸರಿ. ಸದರಿ ಫೈಲ್ ಹಾಗೂ ರಿಜಿಸ್ಟರ್ ನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ದಾಖಲೆಗಳನ್ನು ಹಾಜರುಪಡಿಸಬಹುದು. ಆರೋಪಿಯು ಎಷ್ಟು ಸಾಲವನ್ನು ಪಡೆದಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯು ಎಷ್ಟೆಷ್ಟು ಹಣವನ್ನು ಮರುಪಾವತಿ ಮಾಡಿರುತ್ತಾರೆ ಎಂಬ ಬಗ್ಗೆ ಸಂಬಂಧಪಟ್ಟ Ledger extract ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ Loan Agreement and Ledger extract  ನ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ದಾಖಲೆಗಳನ್ನು ಹಾಜರುಪಡಿಸಬಹುದು. ಆರೋಪಿಯು ಎಷ್ಟು ಸಾಲ ಬಾಕಿ ಇಡುತ್ತಾರೆ ಎಂಬ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯು ರೂ.8,35,729/- ಹಣವನ್ನು ನಮ್ಮ ಫೈನಾನ್ಸ್ ಗೆ ನೀಡಲು ಬಾಕಿ ಇರುತ್ತದೆ

ಎಂದು ತೋರಿಸಲು ಸಂಬಂಧಪಟ್ಟ Ledger extract ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನಿಪಿ-2 ಚೆಕ್ಕಿಗೆ ಪೂರಕವಾದಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿ ದಾಖಲೆಗಳನ್ನು ಹಾಜರುಪಡಿಸಬಹುದು.

ನಮ್ಮ ವಕೀಲರು ಆರೋಪಿಗೆ ನೀಡಿದ ನೋಟೀಸ್ ಗೆ ಆರೋಪಿಯು ತನ್ನ ವಕೀಲರ ಮೂಲಕ ದಿಃ22.07.2025 ರಂದು ಮರು ಉತ್ತರ ನೀಡಿರುತ್ತಾರೆ ಎಂದರೆ ಸರಿ. ಸದರಿ ಉತ್ತರದಲ್ಲಿ ಏನು ಬರೆದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಆರೋಪಿಯು ತನ್ನ ಉತ್ತರದಲ್ಲಿ ಈ ವ್ಯವಹಾರದ ಬಾಬ್ತು ದಿಃ15.12.2021 ರಂದು 3 ನೋಟೀಸ್ ಅನ್ನು ಪಿರ್ಯಾದುದಾರರು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಸದರಿ ದಿನಾಂಕದಂದು 3 ನೋಟೀಸ್ ಅನ್ನು ನೀಡಿರುವುದಿಲ್ಲ. ಸದರಿ 3 ನೋಟೀಸ್ ಗಳಿಗೆ ಆರೋಪಿ ಪರ ವಕೀಲರು ಉತ್ತರವನ್ನು ನೀಡಿರುತ್ತಾರೆ ಎಂದು ತಮ್ಮ ಪ್ರತ್ಯುತ್ತರದಲ್ಲಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯಿಂದ ಸದರಿ ಉತ್ತರಕ್ಕೆ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆದರೂ ಕೂಡಾ 4 ವರ್ಷಗಳ ನಂತರ ನಿಪಿ-2 ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಿ ಒಂದು ಸುಳ್ಳು ಕೇಸನ್ನು ಆರೋಪಿ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಕೇಸಿನ ಬಾಬ್ತು ನಾವು ವಾಹನವನ್ನು ಅಮಾನತ್ತುಪಡಿಸಿರುವುದಿಲ್ಲ. ಸದರಿ ವಾಹನವನ್ನು ಅಮಾನತ್ತುಪಡಿಸಿಕೊಳ್ಳಲು ಪ್ರಯತ್ನಪಟ್ಟಿರುತ್ತೇವೆ. ಆದರೆ

ಸದರಿ ವಾಹನ ಸಿಕ್ಕಿರುವುದಿಲ್ಲ. ನಾವು ಆರ್ಬ್ರಿಟ್ರೇಷನ್ ನಲ್ಲಿ ವಾಹನವನ್ನು ಅಮಾನತ್ತುಪಡಿಸಿಕೊಳ್ಳಲು ಆದೇಶ ಪಡೆದುಕೊಂಡಿರುತ್ತೇವೆ. ಆರೋಪಿಯು ತನ್ನ ಉತ್ತರದಲ್ಲಿ ಆತನು ನೀಡಿದ 25 ಚೆಕ್ಕುಗಳ ಬಾಬ್ತು ಚೆಕ್ಕುಗಳನ್ನು ವಾಪಾಸ್ ನೀಡಬೇಕೆಂದು ಕೇಳಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಉತ್ತರಕ್ಕೆ ನಾವು ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಆರೋಪಿಯು ನೀಡಬೇಕಾಗಿರುವ ಸಾಲದ ಹಣ ಹಾಗೂ ಅದರ ಮೇಲೆ ಇರುವ ಬಡ್ಡಿ ಹಾಗೂ ಇತರ ಖರ್ಚುಗಳ ಬಗ್ಗೆ ವಿವರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಿಪಿ-1 ದಿಃ21.11.2023 ರಲ್ಲಿ ತಯಾರಿಸಲಾಗಿರುತ್ತದೆ ಎಂದರೆ ಸರಿ. ನಿಪಿ-1 Special power of attorney ಎಂದರೆ ಸರಿ. ನಿಪಿ-1 ರಲ್ಲಿ ಎಲ್ಲಾ ಕೇಸುಗಳು ಎಂದು ನಮೂದಾಗಿರುತ್ತದೆ. ನಿಪಿ-1 ರಲ್ಲಿ ಈ ಕೇಸಿನ ನಂಬರ್ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಎಲ್ಲಾ ಕೇಸನ್ನು ನಡೆಸಲು ಅಧಿಕಾರವನ್ನು ನೀಡಲಾಗಿರುತ್ತದೆ. ನಿಪಿ-1 ರಲ್ಲಿ ನನಗೆ ಈ ಕೇಸನ್ನು ನಡೆಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸನ್ನು ನನಗೆ Power of Attorney ಯನ್ನೇ ನೀಡಲಾಗಿರುತ್ತದೆ. ನಿಪಿ-1 ರಲ್ಲಿ ಈ ಕೇಸಿಗೆ ಸಂಬಂಧಪಟ್ಟ Loan transaction number ಅನ್ನು ನಮೂದು  ಮಾಡಿಲ್ಲ ಎಂದರೆ ಸಾಕ್ಷಿದಾರರು ಕಂಪನಿಗೆ ಸಂಬಂಧಪಟ್ಟ ಎಲ್ಲಾ ಕೇಸುಗಳನ್ನು ನಡೆಸಲು ಅಧಿಕಾರವನ್ನು ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಪಿರ್ಯಾದನ್ನು ಸಲ್ಲಿಸುವ ಸಮಯದಲ್ಲಿ ನನಗೆ Power of Attorney ಇರಲಿಲ್ಲ ಎಂದರೆ ಸರಿಯಲ್ಲ.  ಈ ದಿನ ನಾನು Loan Agreement and Ledger Extract ಅನ್ನು ಹಾಜರುಪಡಿಸಿರುವುದಿಲ್ಲ. ನನ್ನ

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಲೋನ್ ಅಗ್ರಿಮೆಂಟ್ ನ ನಂಬರ್ ಅನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಲೋನ್ ಅಕೌಂಟ್ ನಂಬರ್ ಮತ್ತು ಅಗ್ರಿಮೆಂಟ್ ನಂಬರ್ ಒಂದೇ ಇರುತ್ತದೆ. ಈ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಪಿ.ಸಿ.ಆರ್ ನಂ.47/2024 ಕೇಸನ್ನು ದಾಖಲಿಸಿದ್ದು ಸದರಿ ಕೇಸು ಪೊಲೀಸ್ ಠಾಣೆಗೆ ರೆಫರ್ ಆಗಿತ್ತು ಎಂದರೆ ಸರಿ. ಸದರಿ ಕೇಸಿನಲ್ಲಿ 3 ಬಾರಿ ನೋಟೀಸ್ ನೀಡಿದ್ದರೂ ಕೂಡಾ ನಾವು ಸ್ಥಳ ಮಹಜರ್ ಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಆರೋಪಿಯು  ಮುಚ್ಚಿಟ್ಟಿರುತ್ತಾನೆ ಎಂದು ಹೇಳಿ ಸದರಿ ಗಾಡಿಯನ್ನು ತಮಗೆ ತೋರಿಸಿಕೊಡಬೇಕು ಎಂದು ನಾವು ಸದರಿ ದೂರಿನಲ್ಲಿ ನಮೂದು ಮಾಡಿದ್ದೆವು ಎಂದರೆ ಸರಿ. ಸದರಿ ಕೇಸು ಏನು ಆಗಿರುತ್ತದೆ ಎನ್ನುವ ಬಗ್ಗೆ ನಾನು ನೋಡಿ ಹೇಳಬಹುದು.

ಈ ಕೇಸಿನ ಪಿರ್ಯಾದಿಯಲ್ಲಾಗಲೀ ನೋಟೀಸ್ ನಲ್ಲಿ ಎಷ್ಟು ಸಾಲವನ್ನು ಆರೋಪಿಗೆ ನೀಡಲಾಗಿತ್ತು ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ರೂ.16,08,000/- ಸಾಲವನ್ನು NEFT ಮೂಲಕ ನೀಡಿರುತ್ತೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಈ ದೂರಿನಲ್ಲಿ ನಮೂದು ಮಾಡಿರುವ ವಾಹನಕ್ಕೆ ಸಂಬಂಧಪಟ್ಟಂತೆ ಮಾನ್ಯ ಹಾಸನ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ Commercial Execution Petition ಸಲ್ಲಿಸಿರುತ್ತೇವೆ ಎಂದರೆ ಸರಿ. ಅದರಲ್ಲಿ ಎಷ್ಟು ಅವಾರ್ಡ್ ಆಗಿರುತ್ತದೆ ಎನ್ನುವ ಬಗ್ಗೆ ನಾನು ನೋಡಿ ಹೇಳಬಹುದು. ಈ ಪಿರ್ಯಾದಿಯಲ್ಲಿ ತೋರಿಸಿರುವ ಸಾಲದ ಹಣ ಹಾಗೂ ಸದರಿ ಹಾಸನದ

ಜಿಲ್ಲಾ ನ್ಯಾಯಾಲಯದಲ್ಲಿ ಇರುವ Execution Petition ನಲ್ಲಿ ತೋರಿಸಿರುವ ಹಣ ಒಂದೇ ಲೋನ್ ಅಕೌಂಟ್ ಗೆ ಸಂಬಂಧಪಟ್ಟದ್ದು ಇರುತ್ತದೆ.

ಆರೋಪಿಯು ದಿಃ19.07.2018 ರಂದು ರೂ.16,08,000/- ಹಣವನ್ನು ಸಾಲವಾಗಿ ಪಡೆದಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕೊರೋನಾ ಸಮಯದಲ್ಲಿ ಸದರಿ ವಾಹನವನ್ನು ಅಮಾನತ್ತುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಆರೋಪಿಯು ಎಷ್ಟು ಹಣವನ್ನು ಕಟ್ಟಿರುತ್ತಾರೆ ಎಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ದೂರಿನಲ್ಲಾಗಲೀ ಅಥವಾ ನೋಟೀಸ್ ನಲ್ಲಿ ಆಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ ಆಗಲೀ ಸದರಿ ಲೋನ್ ಅಕೌಂಟ್ ಗೆ ಸಂಬಂಧಪಟ್ಟು ಬಡ್ಡಿ ಎಷ್ಟು ಹಾಕಿರುತ್ತೇವೆ ಎಂದು ತಿಳಿರುತ್ತೇವೆ ಎಂದರೆ ಸರಿ. ಆರೋಪಿಯು ಸರಿಯಾಗಿ ಕಂತುಗಳನ್ನು ಕಟ್ಟಿದ್ದರೂ ಕೂಡಾ ಕರೋನಾ ಸಮಯದಲ್ಲಿ ಸದರಿ ವಾಹನವನ್ನು ನಾವು ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು 40 ಸಾವಿರ - 45 ಸಾವಿರದಷ್ಟು ಕಟ್ಟಿರುವ ಹಣ ವ್ಯತ್ಯಾಸವಿದ್ದು ಅದನ್ನು ಪರಿಶೀಲನೆ ಮಾಡಲು ಆರೋಪಿಯ ಬಳಿಯಿಂದ ರಶೀದಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಕರೋನಾ ಸಮಯದಲ್ಲಿ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದು ಕಾನೂನುಬಾಹಿರವಾಗುತ್ತದೆ ಎಂದುಕೊಂಯಿ ನಾವು ಆರೋಪಿಯ ವಿರುದ್ಧ ಒಂದು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ

ಸರಿಯಲ್ಲ. ಆ ಕಾರಣ ಸದರಿ ದೂರಿಗೆ ಸಂಬಂಧಪಟ್ಟು ಪೊಲೀಸರಿಗೆ ನಾವು ಸಹಕಾರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಇದೇ ನ್ಯಾಯಾಲಯದ ಮುಂದೆ ಸಿ.ಸಿ ನಂ.1735/2025 ರಲ್ಲೂ ಈ ಪಿರ್ಯಾದಲ್ಲಿ ತೋರಿಸಿರುವಂತಹ ವಾಹನದ ಸಂಖ್ಯೆಯನ್ನೇ ನಮೂದು ಮಾಡಿರುತ್ತೇವೆ ಎಂದರೆ ಸರಿ. ಆರೋಪಿಯಿಂದ ಭದ್ರತೆಗಾಗಿ ಪಡೆದುಕೊಂಡ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಉದ್ದೇಶಪೂರ್ವಕವಾಗಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡುವ ಉದ್ದೇಶದಿಂದ ಒಂದು ಸುಳ್ಳು ಕೇಸನ್ನು ಆತನ ವಿರುದ್ಧ ನೀಡಿರುತ್ತೇವೆ ಎಂದರೆ ಸರಿಯಲ್ಲ. ಈ ಪಿರ್ಯಾದಿನಲ್ಲಿ ತೋರಿಸಿರುವ ಆರೋಪಿಯು ತೆಗೆದುಕೊಂಡಿರುವ ಸಾಲವು ಸಂಪೂರ್ಣ ತೀರುವಳಿಯಾಗಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ಸದರಿ ಸಾಲವು ಬಾಕಿ ಇದೆ ಎಂದು ಹೇಳಿ ಈ ಸುಳ್ಳು ಕೇಸನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ದುರ್ಲಾಭ ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೀರಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

Sd/-
(ಕುಮಾರಿ ಸುಜಾತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.1736/2025
PW-1

ಎಸ್‌ಆರ್‌ಃ

C.C.No.1736/2025
PW-1